**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ</u>**
**<u>ಜೇವರ್ಗಿ</u>**

**<u>ಸಿಸಿ ನಂ.661/201</u>**

**<u>ಚಾಸಾ-5/ಪಿಡಬ್ಲ್ಯೂ-4</u>**

| | |
|---|---|
| **ಹೆಸರು** | ಗೊಲ್ಲಾಳಪ್ಪ |
| **ಗಂಡನ ಹೆಸರು** | ಮಹಾಂತಪ್ಪ |
| **ವಯಸ್ಸು** | 71 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಬಿರಾಳ ಹಿಸ್ಸಾ |

**<u>ದಿನಾಂಕ 17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ:</u>**

ಚಾಸಾ-1 ನನ್ನ ಮಗಳು, ಚಾಸಾ-4 ನನ್ನ ಮೊಮ್ಮಗಳು. ಆರೋಪಿಗಳು ನನಗೆ ಗೊತ್ತು.

03-ವರ್ಷಗಳ ಹಿಂದೆ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಬಿರಾಳ ಹಿಸ್ಸಾ ಗ್ರಾಮದಲ್ಲಿ ಹೊಲದ ವಿಷಯವಾಗಿ ಆರೋಪಿತರು ಚಾಸಾ-1 ರವರು ಹೊಲದಲ್ಲಿ ಗಳೆ ಹೊಡೆಯತ್ತಿದ್ದಾಗ ನಮ್ಮ ಹೊಲದಲ್ಲಿ ಏಕೆ ಗಳೆ ಹೊಡೆಯುತ್ತಿದ್ದೀರಿ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1ನೆ ಆರೋಪಿತನು ಚಾಸಾ-4 ರವರಿಗೆ ಕೈ ಹಿಡಿದು ಜಗ್ಗಾಡಿ ನೂಕಿಸಿಕೊಟ್ಟಿರುತ್ತಾರೆ. ಸದರಿ ವಿಷಯವನ್ನು ಚಾಸಾ-1 ರವರು ಮನೆಗೆ ಬಂದು ನನಗೆ ಹೇಳಿರುತ್ತಾರೆ. ಆನಂತರ ಚಾಸಾ-1 ರವರು ಆರೋಪಿತರ ವಿರುದ್ದ ದೂರು ನೀಡಿರುತ್ತಾರೆ. ಘಟನೆ ಕುರಿತು ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 20.02.2022 ರಂದು ಘಟನೆ ಕುರಿತು ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ದಿನಾಂಕ 16.02.2022 ರಂದು ಜಗಳವಾಗಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಅವಮಾನವಾಗುವ ರೀತಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಜಗಳವಾದ ದಿನ ನಾನು ಊರಲ್ಲಿ ಇರಲಿಲ್ಲ ಎಂದರೆ ಸರಿ. 1ನೆ ಆರೋಪಿತನು ಚಾಸಾ-1 ರವರ ವಿರುದ್ದ ಇದೆ ನ್ಯಾಯಾಲಯದಲ್ಲಿ ದಾವೆ ನಂ.123/2021 ಸಲ್ಲಿಸಿರುತ್ತಾರೆ ಎಂದರೆ ಸರಿ. 2022 ರಿಂದ ಇಲ್ಲಿಯವರೆಗೆ 1ನೆ ಆರೋಪಿತಳು ಮೊಳಕಾಲಿಗೆ ಸಂಬಂಧಿಸಿದ ಫಿಜಿಯೋ ಥೆರಪಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 1ನೆ ಆರೋಪಿತಳು ಆಗಾಗ ಚಿಕಿತ್ಸೆ ಪಡೆಯುತ್ತಾ ಬಂದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

1ನೆ ಆರೋಪಿಯನ್ನು ನಾನು ನೋಡಿರುತ್ತೇನೆ. ಅವರನ್ನು ನೋಡಿ 03-ವರ್ಷಗಳಾಗಿರುತ್ತದೆ. 2004 ರಲ್ಲಿ ಆರೋಪಿತರು ನನ್ನ ತಂದೆಯಿಂದ ಜಮೀನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಆಗ ನಾನು ಚಿಕ್ಕವಳಿದ್ದೆ ಎಂದು ಹೇಳುತ್ತಾರೆ. 1ನೆ ಆರೋಪಿತಳು 2015 ರಿಂದ 2023 ರವರೆಗೆ ಮೊಳಕಾಲು ನೋವಿನಿಂದ ಬಳಲುತ್ತಿದ್ದು ನಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ 1ನೆ ಆರೋಪಿತಳು ಮೊಳಕಾಲು ಆಪರೇಶನ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. 1ನೆ ಆರೋಪಿತಳ ಗಂಡ ಹಾಗೂ ಚಾಸಾ-1 ರವರ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ. ನನ್ನ ಅಳಿಯ 1ನೆ ಆರೋಪಿಗೆ 04-ಎಕರೆ 21-ಗುಂಟೆ ಖರೀದಿ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

ಹೊಲದ ವಿಚಾರವಾಗಿ 1ನೆ ಆರೋಪಿತಳು ಹೊಲದ ವಿಚಾರವಾಗಿ ಜಮೀನಿನ ವಿಚಾರವಾಗಿ ನನ್ನ ತಂದೆ-ತಾಯಿ ವಿರುದ್ದ ಇದೆ ನ್ಯಾಯಾಲಯದಲ್ಲಿ ದಾವೆ ನಂ.123/2021 ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹಾಗೂ ತಾಯಿಯ ನಡುವೆ ಜೀವನಾಂಶದ ಪ್ರಕರಣವಿದೆ ಎಂದರೆ ಸರಿ. ನನ್ನ ತಂದೆ-ತಾಯಿ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿ. ಜಗಳವು ಸರ್ವೆ ನಂ.47 ರಲ್ಲಿ ಆಗಿರುತ್ತದೆ. ಸರ್ವೆ ನಂ.47 ರಲ್ಲಿ ಎಷ್ಟು ಹಿಸ್ಸೆಗಳಿವೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಾಗುವ ಮುಂಚೆ ಸಿವಿಲ್ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ. 2ನೆ ಆರೋಪಿ 1ನೆ ಆರೋಪಿತಳು ಹೊಲವನ್ನು ಪಾಲಿನಂತೆ ಮಾಡಿರುತ್ತಾರೆ ಎಂದರೆ ಸರಿ. ಸಿವಿಲ್ ದಾವೆಯನ್ನು ಹಿಂಪಡೆಸಬೇಕೆಂದು ಚಾಸಾ-1 ರವರು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

1ನೆ ಆರೋಪಿತಳಿಗೆ ನಡೆದಾಡಲು ಬರದ ಕಾರಣ ಜಗಳವಾದ ಸ್ಥಳದಲ್ಲಿ ಬಂದಿಲ್ಲ ಮತ್ತು ಜಗಳವಾಗಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. 2ನೆ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಮಾನಕ್ಕೆ ಕುಂದು ತಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ